<u>ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾದ ದಿಃ 17.04.2025</u>

<u>ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>

<u>ಪಾಟೀ ಸವಾಲುಃ ಪ್ರತಿವಾದಿ ಪರವಾಗಿ ಶ್ರೀ. ಟಿ.ವಿ. ಸಿ ವಕೀಲರಿಂದಃ</u>

ಸಂಕೇಶ್ವರ ಲ್ಯಾಂಡ್ ಮಾರ್ಕ್ ಕಂಪನಿಯು ರಿಯಲ್ ಎಸ್ಟೇಟ್ ಮತ್ತು ಡೆವೆಲಪ್ ಮೆಂಟ್ ಕೆಲಸ ಮಾಡುತ್ತದೆ. ನಾನು ಆ ಕಂಪನಿಯಲ್ಲಿ 14 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ದಾವಾ ಶೆಡ್ಯೂಲ್ ಸೊತ್ತಿನ ಕುರಿತು ಕ್ರಯದ ವ್ಯವಹಾರ ಮತ್ತು ವೈವಾಹಿಟವನ್ನು ಮಾರಾಟಗಾರರಿಗೆ ಸದರಿ ಕಂಪನಿ ಪರವಾಗಿ ಮಾಡಿದ್ದೇನೆ. ದಾವಾ ಆಸ್ತಿ ನಂ. 1 , ಸರ್ವೆ ನಂ. 15/1 ರಲ್ಲಿ ಎಷ್ಟು ವಿಸ್ತೀರ್ಣ ಇದೆ ಎಂದು ಈಗ ನನಗೆ ಹೇಳಲು ನೆನಪು ಇಲ್ಲ. ಸರ್ವೆ ನಂ. 15/4 ರಲ್ಲಿ 1 ಎಕರೆ 12 ಗುಂಟೆ ವಿಸ್ತೀರ್ಣ ಇರುತ್ತದೆ. ನಾನು ಮೇಲೆ ಹೇಳಿದ ಸರ್ವೆ ನಂಬರ್ ಗಳ ಕುರಿತು 15 ಗುಂಟೆ ಹಾಗೂ 2 ಗುಂಟೆ ಕುರಿತು ದಾವೆಯನ್ನು ಹಾಕಿದ್ದೇನೆ. ಸರ್ವೆ ನಂ. 15/1 ರಲ್ಲಿ 15 ಗುಂಟೆ ಸ. ನಂ. 15/4 ರಲ್ಲಿ 2 ಗುಂಟೆ ಕುರಿತು ದಾವೆಯನ್ನು ಹಾಕಿದ್ದೇನೆ.

ದಾವಾ ಸೊತ್ತುಗಳ ಕುರಿತು ಕ್ರಯದ ವಹಿವಾಟು ಆದ ಮೇಲೆ ನಾನು ರೆವೆನ್ಯೂ ದಾಖಲಾತಿಗಳನ್ನು ಮಾಡಿಕೊಂಡಿದ್ದೇನೆ. ದಾವಾ ಸರ್ವೆ ನಂಬರ್ ಗಳ ಕುರಿತು ಕ್ರಯದ ವಹಿವಾಟು ಆದ ಮೇಲೆ ಅನ್ಯಕ್ರಾಂತ ಆದೇಶದ ಆಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಮೊದಲೆ ಆಗಿತ್ತು ಎಂದು ನುಡಿಯುತ್ತಾರೆ. ಆ ಅನ್ಯಕ್ರಾಂತವು 2015 ರಲ್ಲಿ ಆಗಿತ್ತು, ಅದರ ದಿನಾಂಕ ಗೊತ್ತಿಲ್ಲ. ಕ್ರಯದ ವ್ಯವಹಾರ ಆಗಿದ ದಿನಾಂಕ ಹೇಳಲು ನನಗೆ ಆಗುವುದಿಲ್ಲ.

ದಿನಾಂಕ 28.09.2015 ರಲ್ಲಿ ಆಂಜಿನಪ್ಪರವರಿಂದ ನೊಂದಾಯಿತ ಕ್ರಯದ ಕರಾರು ಪತ್ರ ಮತ್ತು ನೊಂದಾಯಿತ ಜಿ ಪಿ ಎ ದಾಖಲೆಯನ್ನು ಮಾಡಿಕೊಂಡಿದ್ದೇನೆ ಎಂದರೆ ಸರಿ. ಕ್ರಯದ ಕರಾರಿನ ಅಡಿಯಲ್ಲಿ ಮುಂಗಡ ಹಣವನ್ನು ಎಷ್ಟು ಕೊಟ್ಟಿದ್ದೇವು ಈಗ ಗೊತ್ತಿಲ್ಲ. ಜಿ ಪಿ ಎ ದಾಖಲೆ ಆಧಾರದ ಮೇಲೆ ದಿ. 17.11.2015 ರಲ್ಲಿ ಜಮೀನಿನ

ಅನ್ಯಕ್ರಾಂತ ಆದೇಶವಾಗಿತ್ತು ಎಂದರೆ ಸರಿ. ಕ್ರಯದ ವ್ಯವಹಾರವಾದ ಮೇಲೆ ಜಮೀನಿನ ಸರ್ವೆ ಕಾರ್ಯ ಮಾಡಿಕೊಂಡು, ಆ ನಂತರ ನೊಂದಾಯಿತ ಕ್ರಯ ಮಾಡಿಕೊಳ್ಳುವುದಾಗಿ ಮಾತುಕತೆವಾಗಿತ್ತು ಎಂದರೆ ಸರಿ. ಅನ್ಯಕ್ರಾಂತ ಉದ್ದೇಶಕ್ಕಾಗಿ ಜಮೀನಿನ ಸರ್ವೆ ಕಾರ್ಯ ಮಾಡಿಸಿದ್ದೇವು ಎಂದರೆ ಸರಿ. ಸರ್ವೆ ದಾಖಲೆಗಳು ಹಾಜರು ಮಾಡಿದ್ದೇನೆ.

ಸರ್ವೆ ನಂ. 15/1 ಮತ್ತು ಸರ್ವೆ ನಂ. 15/4 ಉತ್ತರ ದಕ್ಷಿಣವಾಗಿ ಹೊಂದಿಕೊಂಡಿರುವ ಜಮೀನುಗಳು ಎಂದರೆ ಸರಿ. ಸರ್ವೆ ನಂ. 15/1 ರ ಜಮೀನಿನ ಪಶ್ಚಿಮಕ್ಕೆ ಪ್ರತಿವಾದಿ ರಾಜಪ್ಪನ ಜಮೀನು ಸರ್ವೆ ನಂ. 15/2 ಇದೆ ಎಂದರೆ ಸರಿ. ಸದರಿ ಪಶ್ಚಿಮಕ್ಕೆ ಪ್ರತಿವಾದಿಯ ಜಮೀನಿನ ಜೊತೆಗೆ ಸ. ನಂ. 15/3 ರ ಸ್ವಲ್ಪ ಭಾಗ ಜಮೀನು ಕೂಡ ಬರುತ್ತದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ.ಸಾಕ್ಷಿ ಮುಂದುವರೆದು ಪಶ್ಚಿಮಕ್ಕೆ ಸರ್ವೆ ನಂ. 15/2 ಮಾತ್ರ ಬರುತ್ತದೆ ಎಂದು ನುಡಿಯುತ್ತಾರೆ .

<u>ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಲಾಗಿ ನೀಡಲಾಯಿತು.</u>

**(**ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು**)**

**ಓ. ಹೇ. ಕೇ. ಸರಿ ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ಶಿಡ್ಲಘಟ್ಟ.